ಸಂಗ್ರಹಿಸಲಾಗುತ್ತಿದ್ದು, ಶೇಖರಿಸಿದ ಹಾಲನ್ನು ಬೆಂಗಳೂರು ಡೈರಿ ಹಾಗೂ ಮದರ್ ಡೈರಿಗಳಲ್ಲಿ ಸಂಸ್ಕರಣೆ ಮಾಡಲಾಗುತ್ತಿದೆ. ಇದರಿಂದಾಗಿ ಹಾಲು ಉತ್ಪಾದಕರಿಗೆ ಯಾವುದೇ ತರಹದ ತೊಂದರೆ ಯಾಗುವುದಿಲ್ಲ. ಹಾಲಿನ ಬಿಲ್‌ಗಳನ್ನು ನಿಯಮಿತವಾಗಿ ಕೊಡಲು ಕೂಡ ವ್ಯವಸ್ಥೆ ಮಾಡಲಾಗಿದೆ. ಕ್ಷೀರಧಾರಾ–ಮೂರನೇ ಹಂತದ ಯೋಜನೆಯಡಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ಒಂದು ಡೈರಿಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ರಾಷ್ಟ್ರೀಯ ಹೈನುಗಾರಿಕಾ ಅಭಿವೃದ್ಧಿ ಮಂಡಲಿಯಿಂದ ಅನುಮೋದನೆ ದೊರೆತ ನಂತರ ಈ ಕೆಲಸವನ್ನು ಪ್ರಾರಂಭಿಸಲಾಗುವುದು.

೪. ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ವಕ್ಕಲು ಗ್ರಾಮದಲ್ಲಿ ಎಂಟು ಗುಂಪಿನ ಒಕ್ಕಲಿಗರಿಗೆ ಸರ್ಕಾರಿ ಆಜ್ಞೆಯಿದ್ದರೂ ಶಿಕ್ಷಣ ಶುಲ್ಕ ಇತ್ಯಾದಿಗಳ ರಿಯಾಯಿತಿಯನ್ನು ಕೊಡದಿರುವುದು.

ಶ್ರೀ ಎನ್. ಹೆಚ್. ಗೌಡ (ಕುಮಟ).—ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ವಕ್ಕಲು ಗ್ರಾಮದ ವಕ್ಕಲು ಕುಂಚಟಿ ವಕ್ಕಲು ಕರಿವಕ್ಕಲು, ಮುಂತಾದ ಎಂಟು ಗುಂಪಿನ ಒಕ್ಕಲಿಗರು ಸರ್ಕಾರದ ಆಜ್ಞೆಯ ಪ್ರಕಾರ 'ಎ' ಗುಂಪಿಗೆ ಅಂದರೆ ಬಿಡಕಟ್ಟಿನ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಈ ಗುಂಪಿಗೆ ಸೇರಿದ, ಶಾಲೆ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕವನ್ನು ಪಡೆಯಬಾರದೆಂದು ಸರ್ಕಾರದ ಆಜ್ಞೆಯಿದೆ. ಆದಾಗ್ಯೂ ಸರ್ಕಾರದ ಆಜ್ಞೆಯನ್ನು ಕಡೆಗಣಿಸಿ ಆ ಗುಂಪಿಗೆ ಅಂದರೆ ಬಿಡಕಟ್ಟಿನ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ ಮುಂತಾದವುಗಳನ್ನು ಪಡೆಯಲಾಗುತ್ತಿದೆ. ಇದು ಬಿಡಕಟ್ಟಿನ ಜನಾಂಗಕ್ಕೆ ಎಸಗುವ ತೀವ್ರ ಅನ್ಯಾಯವಾಗಿದೆ. ಆದ್ದರಿಂದ ಈ ಅನ್ಯಾಯವನ್ನು ತಡೆಯುವ ದಿಸೆಯಲ್ಲಿ ಕೂಡಲೇ ವ್ಯವಸ್ಥೆ ಆಗಬೇಕೆಂದು ಸರ್ಕಾರವನ್ನು ಆಗ್ರಹಪೂರ್ವಕವಾಗಿ ನಾನು ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

೫. ಮೂಲೂರು ನಗರದಲ್ಲಿ ಬಸ್ ಡಿಪೋ ಪ್ರಾರಂಭಿಸುವುದು.

ಶ್ರೀ ಹೆಚ್. ಬಿ. ದ್ಯಾವರಪ್ಪ (ಮೂಲೂರು).—ಮೂಲೂರು ತಾಲ್ಲೂಕು ತಮಿಳುನಾಡಿನ ಪಕ್ಕದಲ್ಲಿದ್ದು ಸಮ್ಮಿಶ್ರಜ್ಯದಿಂದ ತಮಿಳುನಾಡಿಗೆ ಓಡಾಡುವ ಹತ್ತಾರು ಬಸ್ಸುಗಳು ಅಂತರ ರಾಷ್ಟ್ರೀಯ ಸಾರಿಗೆ ಬಸ್ಸುಗಳು ಈ ಮೂಲಕ ಓಡಾಡುತ್ತಿರುವುದು ಸರಿಯಷ್ಟೆ. ಅಲ್ಲದೆ ಬೆಂಗಳೂರು, ಕೆ.ಜಿ.ಎಫ್, ಕೋಲಾರ, ಚಿಕ್ಕಬಳ್ಳಾಪುರ ಕಡೆಗಳಿಗೆ ದಿನವಹಿ ಹತ್ತಾರು ಬಸ್ಸುಗಳು ಓಡಾಡುತ್ತಿದ್ದು ಮೂಲೂರು ನಗರದಲ್ಲಿ ಒಂದು ಬಸ್ ಡಿಪೋ ಆಗಬೇಕಾದ ಒತ್ತಡವಿದ್ದು ಈ ಬಗ್ಗೆ ಅಧಿಕಾರಿಗಳು ಸಹ ಸರ್ಕಾರಕ್ಕೆ ವರದಿ ಮಾಡಿರುವುದಾಗಿ ತಿಳಿದುಬಂದಿರುತ್ತದೆ ಅಧಿಕಾರಿಗಳು ಸ್ಥಳದ ಅಜಮಾಯಿಷಿನಿಂದ ನಗರಕ್ಕೆ ಲಗತ್ತಾಗಿರುವ ಜಮೀನನ್ನು ಸಹ ಒದಗಿಸಿಕೊಡಲು ಒಪ್ಪಿಕೊಂಡಿರುತ್ತಾರೆ. ಈ ಬಗ್ಗೆ ಸರ್ಕಾರದವರು ಜರೂರು ಗಮನ ಹರಿಸಿ ಜನಗಳ ಸೌಲಭ್ಯವನ್ನು ಗಮನದಲ್ಲಿಟ್ಟು ಆದಷ್ಟು ಬೇಗ ಮೂಲೂರು ನಗರದಲ್ಲಿ ಒಂದು ಬಸ್ ಡಿಪೋ ಮಾಡಲು ವ್ಯವಸ್ಥೆ ಮಾಡಬೇಕಾಗಿ ಈ ಮೂಲಕ ಸರ್ಕಾರದ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ —ಮಾನ್ಯ ಅಧ್ಯಕ್ಷರೆ, ಮೂಲೂರು ಕೋಲಾರ ಜಿಲ್ಲೆಯಲ್ಲಿದ್ದು, ಕೋಲಾರ ಜಿಲ್ಲೆಯು ಪ್ರಯಾಣಿಕರ ಸಾರಿಗೆಯು ಭಾಗಶಃ ರಾಷ್ಟ್ರೀಕರಣವಾಗಿದೆ. ಮೂಲೂರು ರಾಷ್ಟ್ರೀಕರಣವಾಗಿಲ್ಲದ ಪ್ರದೇಶದಲ್ಲಿದೆ. ಅನೇಕ ಖಾಸಗೀ ವಾಹನಗಳು ಮೂಲೂರಿಗೆ ಓಡಾಡುತ್ತಿದ್ದು ಮೂಲೂರಿನ ಮುಖಾಂತರ ಬೇರೆ ಬೇರೆ ಸ್ಥಳಗಳಿಗೆ ಹಾದು ಹೋಗುತ್ತಿವೆ. ರಾಜ್ಯ ರಸ್ತೆ ಸಾರಿಗೆ ನಿಗಮ ಕೋಲಾರ, ಕೆ.ಜಿ ಎಫ್., ಚಿಂತಾಮಣಿ ಮತ್ತು ಚಿಕ್ಕಬಳ್ಳಾಪುರ ಘಟಕಗಳ ಕೆಲವು ವಾಹನ ಗಳಿಂದ ಮೂಲೂರಿಗೆ ಪ್ರಯಾಣ ಸೌಲಭ್ಯ ಒದಗಿಸಿದೆ. ಆದಾಗ್ಯೂ ಕೋಲಾರ ಜಿಲ್ಲೆಯಲ್ಲಿ ಸಾರಿಗೆ ಯನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿದ ನಂತರ ಮೂಲೂರಿನಲ್ಲಿ ಒಂದು ಬಸ್ ಡಿಪೋವನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.